ಪರಿಸ್ಥಿತಿಯುಂಟಾಯಿತು. ಕೊಚ್ಚಾಪ್ಪು ಯಾರನ್ನು ತೋರಿಸುತ್ತಾನೋ ಅಂತವನನ್ನು ಪೊಲೀಸರು ಸುತ್ತುವರಿದು ಬಡಿದರು. 'ಹಮಾರ ಆದ್ಮಿ'ಯಾಗಲು ಬಹಳಷ್ಟು ಮಂದಿ ಕೊಚ್ಚಾಪ್ಪುವಿನ ಹಿಂದೆ ಬಿದ್ದರು. ಕಮ್ಯುನಿಸ್ಟರಂತೂ ಪುರಳಿಮಲೆಯನ್ನು ಹತ್ತಿ ಕುರುಚಲು ಕಾಡಿನಲ್ಲಿ ಬಚ್ಚಿಟ್ಟುಕೊಂಡರು. ಸಾವಿರದ ಒಂಬೈನೂರಾ ನಲ್ವತ್ತೆಂಟರ ಕಾಲದ ನೆನಪುಗಳನ್ನು ಹಂಚಿಕೊಂಡು ಗೆರಿಲ್ಲಾ ಯುದ್ಧಕ್ಕೆ ಯೋಜನೆಯನ್ನು ರೂಪಿಸಿದರು. ಈಟಿ, ಮಚ್ಚು, ತಲವಾರ, ಕೈಬಾಂಬು, ಬಂದೂಕುಗಳನ್ನು ಶೇಖರಿಸಲು ನೇಮಿಸಿದ ಗುಂಪಿಗೆ ಪಕ್ಷ ನನ್ನನ್ನು ಸೇರಿಸಿತು. ಅದನ್ನು ನಾನು ನಿರೀಕ್ಷಿಸಿರಲಿಲ್ಲ. ಎಲ್ಲಾ ಆಯುಧಗಳು ಅಪಾಯದ ಸಂಕೇತಗಳಾಗಿದ್ದವು. ಕೇಳಿಸಿಕೊಂಡಾಗಲೇ ನಾನು ಹೆದರಿದೆ. ತುಟಿಗಳು ಒಣಗಿ ಮಾತು ಹೊರಬರಲಿಲ್ಲ. ನಾಲಗೆ ಗಂಟಲೊಳಗೆ ಇಳಿದಂತೆ ಭಾಸವಾಯಿತು.

ಗೋಪೀನಾಥನನ್ನು ಭೇಟಿಯಾಗಿ ಇದರಿಂದ ಬಿಡುಗಡೆ ಕೇಳಿದರೆ ಹೇಗೆ? ಬೇಡ. ಪರಿಣಾಮವಾಗಿ ಎರಡೂ ಪಕ್ಷಗಳು ಏಟು ತಿನ್ನಬೇಕಾಗುತ್ತದೆ. ನಡುಕ ನನ್ನಿಂದ ಬಿಟ್ಟು ಹೋಗುತ್ತಿಲ್ಲ. ಒಂದು ಬೆಡ್‌ಶೀಟು, ಎರಡು ಮೂರು ಉಡುಪುಗಳನ್ನು ಎತ್ತಿಟ್ಟು 'ಬರ್ತೀನಿ' ಎಂದು ಹೇಳಿ ತಿರುಗಿ ಕೂಡ ನೋಡದೆ ಹೊರಟುಹೋದೆ. ಹೊಳೆಯಲ್ಲಿ ಸ್ನಾನ ಮಾಡುವಾಗ ನಾನು ಮುಳುಗುತಜ್ಞನಾಗಿದ್ದೆ. ದಡದಲ್ಲಿ ಗೆಳೆಯರೆಲ್ಲಾ ಗಾಬರಿಯಿಂದ ಕುಳಿತಿದ್ದಾಗ ನಾನು ಬೆಣಚು ಕಲ್ಲುಗಳನ್ನು ಹೆಕ್ಕಿ ಸಣ್ಣ ಸಣ್ಣ ಮೀನುಗಳನ್ನು ಸವರುತ್ತಾ ನೀರಿನೊಳಗೆ ಬಚ್ಚಿಡುತ್ತಿದ್ದೆ.

ಹೇಗೇಗೋ ಮಾವನ ಮನೆ ತಲುಪಿದೆ. ಸುಮಿತ್ರಾ ನಿದ್ರಿಸದೆ ಕಾಯುತ್ತಿದ್ದಳು. ಮೇಜಿನ ಮೇಲೆ ನನ್ನ ಊಟವನ್ನು ಮುಚ್ಚಿಟ್ಟಿದ್ದರು.

ಖಾರವಾದ ಹೊಳೆ ಮೀನಿನ ಸಾರು. ಮಜ್ಜಿಗೆಯನ್ನು ಬೆರೆಸಿ ತಾನು ಊಟ ಮಾಡದೆ ಅತ್ತೆ ಮತ್ತು ಅವರ ನಾಲ್ಕು ಮಕ್ಕಳು ಅದನ್ನು ನೋಡುತ್ತಾ ನಾಲ್ಕು ಬದಿಯಲ್ಲಿ ನಿಂತಿದ್ದರು. ಯಾರದ್ದಾದರೂ ಧ್ವನಿ ಕೇಳಿಸುತ್ತಿದೆಯೇ ಎಂದು ತಿಳಿಯಲು ಕತ್ತಲೆ ಕವಿದ ಅಂಗಳದಲ್ಲಿ ಮಾವ ಶತಪಥ ಹಾಕುತ್ತಿದ್ದರು.

ನನ್ನನ್ನು ನನ್ನ ಕೋಣೆಯಲ್ಲಿ ಬಿಟ್ಟು ಅವರೆಲ್ಲಾ ನೆಮ್ಮದಿಯಿಂದ ನಿದ್ರಿಸಲು ಹೋದರು. ಎಷ್ಟೋ ದಿನಗಳಿಂದ ನಿದ್ರೆಗೆಟ್ಟಿದ್ದ ಸುಮಿತ್ರಾ ಅಂದು ಆಯಾಸದಿಂದ ನಿದ್ರಿಸಬಹುದೆಂದುಕೊಂಡೆ.

ನಾನು ಚುರುಕಾದೆ. ಉಡುಪು, ಸರ್ಟಿಫಿಕೇಟುಗಳನ್ನೆಲ್ಲಾ ಒಂದು ಚೀಲಕ್ಕೆ ತುಂಬಿದೆ. ಮಾವ ಕೊಡುತ್ತಿದ್ದ ಪಾಕೆಟ್ ಮನಿಯಲ್ಲಿ ಉಳಿಕೆಯಾಗಿದ್ದನ್ನು ಒಂದು ಪುಸ್ತಕದೊಳಗೆ ಇಟ್ಟಿದ್ದೆ. ಅದನ್ನು ಎತ್ತಿ ಬೇಗಿನಲ್ಲಿಟ್ಟೆ. ಸುಂದರವಾದ ಹಸ್ತಾಕ್ಷರದಲ್ಲಿ ಸುಮಿತ್ರಾಳಿಗೆ ಒಂದು ಪತ್ರ ಬರೆದೆ.

ಸುಮಿತ್ರಾ, ನನಗೊಂದು ಕೆಲಸ ಸಿಕ್ಕಿದೆ. ಅದು ನನಗೆ ಅತ್ಯವಶ್ಯಕವೆಂದು ಕೊಂಡಿದ್ದೇನೆ. ಕಾಗೆ ಕಾ.. ಕಾ..ಕಾ ಎಂದು ನೆಂಟರಿಷ್ಟರನ್ನು ಕರೆಯುವ ಒಂದು ಪ್ರಭಾತದಲ್ಲಿ ಕೈತುಂಬಾ ಹಣದೊಂದಿಗೆ ನಾನು ಹಿಂತಿರುಗಿ ಬರುತ್ತೇನೆ. ಕಾಯುತ್ತಿರು... ಎಂದಷ್ಟೆ ನನಗೆ ಈಗ ಹೇಳಲು ಸಾಧ್ಯ.

ನೆಲದ ಮೇಲೆ ಚಾಪೆಯಲ್ಲಿ ಮೈ ಮರೆತು ಮಲಗಿರುವ ನಾಲ್ಕು ಹೆಣ್ಣುಮಕ್ಕಳನ್ನು ನಾನು ಬಾಗಿಲ ಸಂದಿಯಲ್ಲಿ ನೋಡಿದೆ. ಮಂಕಾದ ಬೆಳದಿಂಗಳ ಬೆಳಕಿನಲ್ಲಿ ಅವರನ್ನು ಗುರುತಿಸುವುದು ಪ್ರಯಾಸವೆನಿಸುತ್ತಿತ್ತು. ರತಿಯ ಎದ್ದು ಬೀಳುತ್ತಿರುವ ಎದೆಯಾಚೆ ಏನೂ ತಿಳಿಯದೆ ನಿಷ್ಕಳಂಕವಾಗಿ ನಿದ್ರಿಸುತ್ತಿರುವ ಸುಮಿತ್ರಾಳನ್ನು ನಾನು ಕಂಡೆ. ಅನಂತರ ತಡಮಾಡಲಿಲ್ಲ. ಹಿಂಬದಿಯ ಬಾಗಿಲನ್ನು ಸದ್ದು ಮಾಡದಂತೆ ತೆರೆದು ಕಳ್ಳ ಹೆಜ್ಜೆ ಇಡುತ್ತಾ ಹೊರಕ್ಕಿಳಿದೆ.

ನದಿಯಾಚೆ ಇರುವ ಮುತ್ತಾಚ್ಚಿ ಮಲೆ ಅನೇಕ ರಹಸ್ಯಗಳನ್ನು ತನ್ನೊಳಗೆ ಬಚ್ಚಿಟ್ಟುಕೊಂಡು ಎಲ್ಲವನ್ನೂ ಗಮನಿಸುತ್ತಿದೆ. ನಯವಾದ ದುಂಡಗಿನ ಬಂಡೆಗಳ ಮೇಲೆ ಹೆಜ್ಜೆಗಳನ್ನೂರುತ್ತಾ ಹಾಲ ಬೆಳದಿಂಗಳಿನಲ್ಲಿ ನಗೆ ಸೂಸಿ ಹರಿಯುವ ನದಿಯನ್ನು ದಾಟಿ ಮುತ್ತಾಚ್ಚಿ ಮಲೆಯ ತಪ್ಪಲಿನತ್ತ ನಡೆದೆ. ಹೆಜ್ಜೆಹೆಜ್ಜೆಗೂ ಕತ್ತಲೆ ಗಾಢವಾಗುತ್ತಿತ್ತು.

ನನಗೆ ಹಾವು, ಹುಲಿ, ಸಿಂಹಗಳಿಗಿಂತಲೂ ಹೆಚ್ಚಿನ ಭಯ ಆಯುಧದಾರಿಗಳಾದ ಮನುಷ್ಯರನ್ನು ಕಂಡರೆ.

ಅಧ್ಯಾಯ–7

ನಾನು ಮತ್ತೆ ಊರಿಗೆ ಮರಳುತ್ತೇನೆಂಬ ನಿರೀಕ್ಷೆ ಸುಮಿತ್ರಾ ಮತ್ತು ಅತ್ತೆ ಮಾವಂದಿರಿಗೆ ಇತ್ತೋ ಗೊತ್ತಿಲ್ಲ. ಆದರೆ ಆ ಬಗ್ಗೆ ಯೋಚಿಸಿಯೇ ಇರಲಿಲ್ಲ. ಏಕೆಂದರೆ ಊರಿನಲ್ಲಿರುವ ಎರಡು ಪಕ್ಷಗಳಿಗೆ ನಾನು ಶತ್ರುವಾಗಿದ್ದರೆ, ಅವುಗಳ ದ್ವೇಷ ತಕ್ಷಣಕ್ಕೆ ಶಮನಗೊಳ್ಳಲಾರದು. ಕೋಪ ಕೆರಳಿದ ಭಗವತಿ ತೆಯ್ಯಂಗಳಂತೆ ಅವರೆಲ್ಲಾ ಕಣ್ಣಿಗೆ ಕಂಡವರನ್ನೆಲ್ಲಾ ಕೊಚ್ಚಿಕೊಚ್ಚಿ ಸೇಡು ತೀರಿಸಿಕೊಳ್ಳುತ್ತಾರೆ. ಬಲಿಗಾಗಿ ಅರ್ಪಿಸಿದ ಪ್ರಾಣಿಗಳ ರಕ್ತವನ್ನು ಗಟಗಟನೆ ಸೊಕ್ಕಿನಿಂದ ಕುಡಿಯುವ ತೆಯ್ಯಂಗಳನ್ನು ಕಂಡರೆ ಭಕ್ತರಿಗೆ ತುಂಬಾ ಇಷ್ಟ. ಪಾಡ್ದನಗಳನ್ನು ಹಾಡಿ ಜನ ಅವುಗಳನ್ನು ಅಟ್ಟಕ್ಕೇರಿಸುತ್ತಾರೆ. ಎಲ್ಲಾ ವೀರಾರಾಧನೆಗಳು ಭಯದಿಂದಲೇ ಹೆಣೆಯಲ್ಪಡುತ್ತವೆ. ಸತ್ತು ಮಣ್ಣಾದ ಪ್ರತೀಕಾರೀ ದಾಹಿಗಳನ್ನು ಹೂ ಎಲೆಗಳನ್ನು ಅರ್ಪಿಸಿ ಪೂಜಿಸಬಹುದು. ಆದರೆ ಬದುಕಿರುವವರನ್ನು ಹಾಗೆ ಆರಾಧಿಸಲು ಸಾಧ್ಯವೇ? ನನಗೂ ಅವುಗಳನ್ನು ಕಂಡರೆ ಭಯ.

ಹೋರಾಟ, ಹೊಡೆದಾಟ, ಯುದ್ಧಗಳನ್ನು ಕೇಳಿಸಿಕೊಂಡೇ ಬೆಳೆದವನು ನಾನು. ನಾಟಿ ನೆಡುವ ಹೆಂಗಸರು ಕೂಡ ಅದನ್ನು ಉರುವಿಡುತ್ತಾರೆ. ಊರನ್ನಾಳುವ ದೊರೆಗೋಸ್ಕರ, ತುಂಡು ರಾಜರಿಗೋಸ್ಕರ ಬಾಕು ಬೀಸಿ ತಲೆ ಕತ್ತರಿಸಿದ ವೀರಾಧಿವೀರರನ್ನು ಗೀತೆಗಳಿಂದಲೇ ಆರಾಧಿಸುತ್ತಾರೆ. ಅಷ್ಟಕ್ಕೆ ಅವರ ಸೇಡಿನ ಜ್ವಾಲೆ ತಣ್ಣಗಾಗುವುದಿಲ್ಲ. ಯಾವುದಾದರೂ ಒಂದು ವರ್ಷ ತೆಯ್ಯಂನ ಬನದಲ್ಲಿ ಹೊಡೆದಾಟವಾದರೆ ಸೇಡು ಉಳಿದುಕೊಳ್ಳುತ್ತದೆ. ಅದು ಮುಂದಿನ ವರ್ಷ ತೆಯ್ಯಂನವರೆಗೆ ಹೊಗೆಯಾಡುತ್ತಿರುತ್ತದೆ. ಚೆಂಡೆಯ ಮೇಲಿನ ಕೋಲಿನ ಏಟು ಬೀಳುವಾಗ ಅದರ ಸದ್ದಿಗೆ ಸೇಡಿನ ಕಿಡಿ ಹೊತ್ತಿ ಉರಿಯುತ್ತದೆ. ಅದರ ನಂತರ ಬೈದಾಟ, ಹೊಡೆದಾಟ, ಬಡಿದಾಟ, ರಕ್ತದೋಕುಳಿ... ಹೊಡೆಯುವವನೊಬ್ಬ ಒಮ್ಮೆ ಅರಚಿದ್ದ ಅಷ್ಟಕ್ಕೆ ತೆಯ್ಯಂ ಸ್ಟಾಪ್, ಚೆಂಡೆ ಸ್ಟಾಪ್, ಕುಂಜುಟ್ಟಿ ಪೆರುವಣ್ಣಾನ್ (ತೆಯ್ಯಂವೇಷಧಾರಿ) ಸ್ಟಾಪ್!

ತೆಯ್ಯಂ ಬನಗಳು ಅನ್ಯ ಜಾತಿಯವರ ಅಥವಾ ಪಂಗಡದವರ ಪಾಲಾದರೆ ಹಿಂದಿನ ವರ್ಷ ಹೊಡೆದಾಡಿದವರ ಸೇಡು ಹಾಗೆಯೇ ಬಾಕಿಯಿರುತ್ತದೆ. ಕೊಡಂಗಲ್ಲೂರು ಭಗವತಿಯ ದೇಗುಲಕ್ಕೆ ಹೋಗಿ ಅಸಭ್ಯ ಗೀತೆಗಳಿಂದ ದೇವಿಯನ್ನು ಸ್ತುತಿಸಿ ಮನದ ಭಾರನ್ನು ಇಳಿಸುವಂತೆ, ಕೈಯ ಬಲವನ್ನು ಪ್ರದರ್ಶಿಸಿ ಜೋಮು ನೀಗಲು, ಬನವಿಲ್ಲವೆಂದಾದರೆ ಸೇಡು ತೀರಿಸಲಾಗುವುದಿಲ್ಲ. ಮಾವಿಲ ಬನದಲ್ಲಿ ನಡೆಯುವ ಹೊಡೆದಾಟ ಉತ್ಸವದಂತಿರುತ್ತದೆ. ಬನದಲ್ಲಿ ಎರಡು ಗುಂಪುಗಳ ನಡುವೆ ಹೊಡೆದಾಟ ಆರಂಭವಾಗುತ್ತದೆ. ತೀಯ್ಯರ ಹೆಗಯ್ಯರಿ ನಂಬ್ಯಾರುಗಳು ಎದುರಾಳಿಗಳ ಕಪಾಳಕ್ಕೆ ಕೈ ಎತ್ತಿ ಬೀಸುತ್ತಾರೆ. ಹಾಗೆ ನೋಡಿದರೆ ಅಂಡಲೂರಿನವರು ಶಾಂತಿಪ್ರಿಯರು. ಅದು ಬುದ್ಧನ ದೇಗುಲವಂತೆ. ಅಲ್ಲಿ ಹೊಡೆದಾಟವಿಲ್ಲ... ಬರೆ ಹಿಡಿತ. ಎಣ್ಣೆ ಹಾಕಿ ತೊಯ್ದ ತೆಂಗಿನ ಕಾಯಿಗೋಸ್ಕರ ಹಿಡಿತ ಪ್ರಾರಂಭಿಸುತ್ತಾರೆ.

ಮುತ್ತಾಚ್ಚಿಮಲೆಯ ನಿಗೂಢತೆಯಲ್ಲಿ ಒಂದು ಹಗಲೆಲ್ಲಾ ಅಲೆದಾಡಿದೆ. ಬಾಯಾರಿಕೆ ಪರಿಹರಿಸಲು ಕಾಡುತೊರೆಗಳನ್ನು ಅವಲಂಭಿಸಿದೆ. ಆಯಾಸ ನೀಗಲು ಆನೆಯ ಬೆನ್ನಿನಂತಿರುವ ಕಪ್ಪು ಬಂಡೆಗಳಿದ್ದವು. ಯಾರಿಗೂ ಬೇಡದ ಅನಾಥವಾಗಿ ಬಿದ್ದಿರುವ ಮಾವಿನ ಹಣ್ಣುಗಳು ನನ್ನ ಹಸಿವನ್ನು ಹಿಂಗಿಸಿದವು. ನಿಜ ಹೇಳಬೇಕೆಂದರೆ... ಅಂತಹ ರುಚಿಯಾದ, ಸವಿಯಾದ ಮಾವನ್ನು ಅದರ ನಂತರ ನಾನೆಂದೂ ತಿಂದಿಲ್ಲ.

ಸಂಜೆಯಾಗುವಷ್ಟರಲ್ಲಿ ಮುತ್ತಾಚ್ಚಿಮಲೆಯ ಮತ್ತೊಂದು ಬದಿಯನ್ನು ತಲುಪಿದ್ದೆ. ಅದು ಕೂಡ ಒಂದು ಹಳ್ಳಿ, ಉರಿಯುತ್ತಿರುವ ಬುಡ್ಡಿದೀಪಗಳು ಅಲ್ಲಿ ಮನೆಗಳಿವೆಯೆಂದು ಸಾರಿ ಹೇಳುತ್ತಿದ್ದವು. ಕತ್ತಲೆಯಲ್ಲಿಯೇ ಒಂದು ಕಾಲು ಹಾದಿ ಪತ್ತೆಯಾಯಿತು. ದಾರಿಯಲ್ಲಿ ಯಾರೂ ಸಿಗದೇ ಇದ್ದಿದ್ದು ಒಳ್ಳೆಯದೇ ಆಯಿತು. ಅಪರಿಚಿತನೊಬ್ಬ ಹಳ್ಳಿಯ ಹಾದಿಯಲ್ಲಿ ಹೋಗುತ್ತಿದ್ದರೆ ಹಲವಾರು ಮಂದಿಯ ಪ್ರಶ್ನೆಗಳಿಗೆ ಉತ್ತರಿಸಬೇಕು.

'ಎಲ್ಲಿಂದ ಬರ್ತಾ ಇದ್ದೀರಾ? ಈ ರಾತ್ರೆಯಲ್ಲಿ ಎಲ್ಲಿಗೆ ಪ್ರಯಾಣ?'

ಇಂತಹ ಪ್ರಶ್ನೆಗಳು ಸರ್ವೇಸಾಧಾರಣ. ಕೆಲವರು ಬೆಂಕಿಕಡ್ಡಿ ಗೀರಿ ಬೆಳಕನ್ನು ಮುಖದ ಹತ್ತಿರ ತಂದು, 'ನೀವು ಯಾವೂರಿನವರು? ನಿಮ್ಮನ್ನು ಇಲ್ಲೆಲ್ಲೂ ನೋಡಿಲ್ಲವಲ್ಲ' ಎಂದು ಅನುಮಾನ ವ್ಯಕ್ತಪಡಿಸುತ್ತಾರೆ.

ಸದ್ಯ, ಯಾರೂ ಬೆಂಕಿಕಡ್ಡಿ ಗೀರಿ ಮುಖದ ಹತ್ತಿರ ತರಲಿಲ್ಲ. ತುಂಬಾ ಹೊತ್ತು ನಡೆದ ಮೇಲೆ, ಟಾರು ರಸ್ತೆ ಸಿಕ್ಕಿತು. ತಲಚ್ಚೇರಿಗಿರುವ ಬಸ್ಸುಗಳೆಲ್ಲಾ ಹೋಗಿಯಾಗಿತ್ತು. ಎಂ.ಆರ್.ಎಸ್ಸ್. ಎಂಪೀಸಿ, ಎಸ್.ಎನ್.ಬಿ.ಯೆಸ್.ಗಳೆಲ್ಲಾ ಹೋದನಂತರ